**CC No.2058/2023**
**CW:03**
**PW:03**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.**
**ರವರ ನ್ಯಾಯಾಲಯ, ಧಾರವಾಡ.**

**ಸಿಸಿ ನಂಃ 2058/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಫಕಿರಪ್ಪ ದಾಸ್ತಿಕೊಪ್ಪ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ನಿಂಗನ್ನಕೊಪ್ಪ, ಕಲಘಟಕಿ ತಾಲ್ಲೂಕು |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 03.07.2026.**

**ಮುಖ್ಯ ವಿಚಾರಣೆ:ಮಾನ್ಯ ಹಿಸಸಅ ರವರಿಂದ**

ಚಾಸಾ.01 ನನ್ನ ತಮ್ಮನ ಮಗ. 2023 ನೇ ಸಾಲಿನಲ್ಲಿ ಚಾಸಾ.01 ರವರು ವಿದ್ಯಾಭ್ಯಾಸಕ್ಕಾಗಿ ನಮ್ಮ ಊರಿನಿಂದ ಧಾರವಾಡಕ್ಕೆ ಬರುತ್ತಿದ್ದರು. ನಾನು ಮನೆಯಲ್ಲಿದ್ದಾಗ ನನ್ನ ತಮ್ಮನಾದ ಚಾಸಾ.05 ರವರು ಬಂದು ನನ್ನನ್ನು ಕರೆದು ಚಾಸಾ.01 ರವರಿಗೆ ಯಾರೋ ಹಲ್ಲೇ ಮಾಡಿರುವುದಾಗಿ ಹೇಳಿ ಅಲ್ಲಿಗೆ ಹೋಗೋಣ ಎಂದು ತಿಳಿಸಿದರು. ನಂತರ ಠಾಣೆಯಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು. ಈಗ ನೋಡುತ್ತಿರುವ ನಿ.ಪಿ.02 ನಾನು ಸಹಿ ಮಾಡಿದ ದಾಖಲೆ ಆಗಿರುತ್ತದೆ. ದಾಖಲೆಯು ಸ್ಥಳ ಪಂಚನಾಮೆ ಆಗಿದ್ದು ಸಾಕ್ಷೀಯ ಸಹಿಯನ್ನು **ನಿ.ಪಿ.02(ಸಿ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನನ್ನನ್ನೊಂದಿಗೆ ಚಾಸಾ.02 ರವರು ಇದ್ದರು. ನನ್ನ ಸಮಕ್ಷಮ ಪೋಲೀಸ್ ರು ಯಾವುದೇ ವಸ್ತುವನ್ನು ಜಪ್ತು ಪಡಿಸಿರುವುದಿಲ್ಲ. ನಿ.ಪಿ.02 ರಲ್ಲಿನ ಅಂಶಗಳು

ನನಗೆ ಗೊತ್ತಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಎಂ.ಓ.01 ವನ್ನು ನಾನು ಹಿಂದೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಹಿಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ಪೊಲೀಸರು ನನ್ನನ್ನು ಮತ್ತು ಚಾಸಾ.02 ರವರನ್ನು ಸ್ಥಳ ಪಂಚನಾಮೆಗೆ ಕರೆಯಿಸಿ ನಮ್ಮ ಸಮಕ್ಷಮ ಧಾರವಾಡದ ಮಾಳಮಡ್ಡಿ ಕೆ.ಇ ಬೋರ್ಡ ಶಾಲೆಯ ಹತ್ತಿರ ಆರೋಪಿತ ಚಾಸಾ.1 ರವರಿಗೆ ಹೋಡಿದಿರುತ್ತಾರೆ ಎಂದು ಪಂಚನಾಮೆಯನ್ನು ಮದ್ಯಾಹ್ನ 11.00 ರಿಂದ 12.00 ಸಮಯದಲ್ಲಿ ಮಾಡಿ ಎಂ.ಓ.01-ಕಬ್ಬಿಣದ ರಾಡವನ್ನು ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಸದರಿ ಸ್ಥಳದಲ್ಲಿ ನಿ.ಪಿ.02 ಕ್ಕೆ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಕಬ್ಬಿಣದ ರಾಡನ್ನು ಜಪ್ತು ಮಾಡಿ ಅದಕ್ಕೆ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷೀಗೆ ನಿ.ಪಿ.03-ಚೀಟಿಯನ್ನು ತೋರಿಸಿ ಅದರಲ್ಲಿನ ಎರಡನೇ ಸಾಕ್ಷೀದಾರ ಎಂದು ತೋರಿಸಿರುವಲ್ಲಿ ಕಾಣಿಸುತ್ತಿರುವ ಸಹಿ ಅವರ ಸಹಿ ಎಂದು ಸೂಚಿಸಿದಾಗ ತಮ್ಮ ಸಹಿ ಅಲ್ಲ ಎಂದು ನುಡಿಯುತ್ತಾರೆ. ಘಟನೆ ಯಾಗಿ ಈಗ 03-04 ವರ್ಷ ಕಳೆದಿರುತ್ತದೆ ಎಂದರೆ ಸರಿ. ಈಗ ನನ್ನ ವಯಸ್ಸು ಸುಮಾರು 66

ವರ್ಷ ಆಗಿರುತ್ತದೆ ಎಂದರೆ ಸರಿ. ಇದರಿಂದ ನನ್ನ ನೆನಪಿನ ಶಕ್ತಿ ಕಡಿಮೆ ಆಗಿರುವುದರಿಂದ ಮುದ್ದೆಮಾಲು ಮತ್ತು ಸಹಿಯನ್ನು ಗುರುತಿಸಲು ಆಗುತ್ತಿಲ್ಲ ಎಂದರೆ ನಾನು ಅವುಗಳನ್ನು ನೋಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ವಕೀಲರು ಗೈರುಹಾಜರು ಆಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ - ಇರುವುದಿಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**